ಅಸಲು ದಾವೆ ನಂಬರ್ 76/2017 ಡಿ.ಡಬ್ಲ್ಯೂ.- 1

ದಿನಾಂಕಃ 20/06/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಸಾಕ್ಷಿಯನ್ನು ಡಿ.ಡಬ್ಲ್ಯೂ.- 1 ಎಂದು ವಿಚಾರಣೆ ಮಾಡಲಾಯಿತು.

ಮುಖ್ಯ ವಿಚಾರಣೆ ಃ ಪ್ರತಿವಾದಿ ಪರ ವಕೀಲರಾದ ಶ್ರೀ ಟಿ.ಎಸ್.ಕೆ. ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆಂದು ಪ್ರಮಾಣಿಕರಿಸುತ್ತೇನೆ.

ಸಾಕ್ಷಿ ಪುರಸಭಾ ಮುಖ್ಯಾಧಿಕಾರಿಗಳು ನೀಡಿದ ಮನೆ ಮಂಜೂರಾತಿ ಹಾಗೂ ಕಾಮಾಗಾರಿ ಆದೇಶದಪತ್ರವನ್ನು ನಿಡಿ-1 ಎಂದು, ದಿನಾಂಕಃ 08-07-2009 ರಂದು ಪುರಸಭಾ ಮುಖ್ಯಾಧಿಕಾರಿಗಳು ನೀಡಿದ ಸೂಚನ ಪತ್ರವನ್ನು ನಿಡಿ-2 ಎಂದು, ಕ್ಯಾಶ್ ಡಿಮ್ಯಾಂಡ್ ರಿಜಿಸ್ಟರ್ ಅನ್ನು ನಿಡಿ-3 ಎಂದು, ಉಪನೊಂದಣಾಧಿಕಾರಿಯವರ ಕಚೇರಿಯವರು ನೀಡಿದ ದೃಡಿಕೃತ ಅನುಬಂಧ-3 ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿ ಪ್ರತಿಯನ್ನು ನಿಡಿ-4 ಎಂದು ಗುರುತಿಸಲಾಯಿತು.

(ಪ್ರತಿವಾದಿಯ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.)

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಹೊಳೆನರಸೀಪುರ